# ಶ್ರೀ ಜಡೆ ಶಂಕರಲಿಂಗ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

**ನಂ-3431/ಒ, ಮೊದಲನೇ ಮಹಡಿ, 7ನೇ ಮುಖ್ಯರಸ್ತೆ, ಸುಬ್ಬಣ್ಣಗಾರ್ಡನ್, ವಿಜಯನಗರ, ಬೆಂಗಳೂರು-560040.**
**ದೂರವಾಣಿ ಸಂಖ್ಯೆ-080-23145994 | ಇ-ಮೇಲ್- sjssccl@gmail.com | ವೆಬ್‌ಸೈಟ್ :www.sjssccl.co.in**

---

ಮಾನ್ಯ ಶೇರು ಸದಸ್ಯರೆ,

ಈ ಮೂಲಕ ಮಾನ್ಯ ಶೇರುದಾರರಿಗೆ ವಿನಂತಿಸುವುದೇನೆಂದರೆ, ನಮ್ಮ ಸಹಕಾರಿ ಕಛೇರಿಯಲ್ಲಿರುವ ವಿಳಾಸಕ್ಕೆ ವಾರ್ಷಿಕ ಮಹಾಸಭೆಯ ಪತ್ರಗಳನ್ನು ರವಾನಿಸುತ್ತಿದ್ದು ಪ್ರತಿ ವರ್ಷ 20 ರಿಂದ 30 ಪತ್ರಗಳು ಮರಳಿ ಬರುತ್ತಿವೆ. ಮತ್ತೆ ಕೆಲವು ಶೇರು ಸದಸ್ಯರು ಪತ್ರವೇ ಬಂದಿಲ್ಲವೆಂದು ತಿಳಿಸಿರುತ್ತಾರೆ. ಈ ಕಾರಣದಿಂದಾಗಿ ಸಕಾಲದಲ್ಲಿ ಸಹಕಾರಿಯ ಮಹತ್ವದ ಪತ್ರಗಳನ್ನು ರವಾನಿಸಲು ತಮ್ಮೆಲ್ಲರ ಹಾಲಿ ಅಂಚೆ ವಿಳಾಸ, ದೂರವಾಣಿ ಸಂಖ್ಯೆ, ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐಡಿಯನ್ನು ನಮ್ಮ ಕಛೇರಿಗೆ ಶೀಘ್ರದಲ್ಲಿಯೇ ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

ಮುಂಬರುವ ದಿವಸದಲ್ಲಿ ಚುನಾವಣೆ ಅಥವಾ ಮಹಾಸಭೆಗೆ ಹಾಜರಾಗಲು ಗುರುತಿನ ಚೀಟಿ ಅತೀ ಮಹತ್ವದ ಪಾತ್ರ ವಹಿಸಲಿದೆ. ಆ ಕಾರಣದಿಂದಾಗಿ ನಮ್ಮ ಸಹಕಾರಿಯ ಶೇರುದಾರರೆಲ್ಲರೂ ಯಾರ್ಯಾರು ಗುರುತಿನ ಚೀಟಿ ಪಡೆದಿಲ್ಲವೋ 2 ಸ್ಟಾಂಪ್ ಸೈಜಿನ ಭಾವಚಿತ್ರವನ್ನು ನಮ್ಮ ಕಛೇರಿಗೆ ಸಲ್ಲಿಸಿ ಗುರುತಿನ ಚೀಟಿಯನ್ನು ಪಡೆಯಲು ಕೋರುತ್ತೇವೆ.

ಅಂತಿಮವಾಗಿ ಪ್ರತೀ ಶೇರುದಾರರು ತಪ್ಪದೆ 2 ವಾರ್ಷಿಕ ಮಹಾಸಭೆಗೆ ಹಾಜರಾಗಿದ್ದರೆ ಹಾಗೂ ಕನಿಷ್ಠ ವ್ಯವಹಾರ ಮಾಡಿದರೆ ಮಾತ್ರ ತಾವು ಸಹಕಾರಿಯ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತೀರಿ ಎಂಬ ಮಹತ್ವದ ವಿಷಯ ತಮ್ಮ ಗಮನಕ್ಕೆ ತರಬಯಸುತ್ತೇನೆ.

**ತಮ್ಮೆಲ್ಲರ ಸಹಕಾರ ಸದಾ ಇರಲಿ**